

# ದೊಡ್ಡ ಸೇವೆಗಿಳಿದ ಪುಟ್ಟ ಹೃದಯ

■ ಪ್ರವೀಣ ಕುಲಕರ್ಣಿ

ಸಮಾಜದ ನೆರವಿಗಾಗಿ ಪುಟ್ಟ ಹೃದಯವೊಂದು ದೊಡ್ಡದಾಗಿ ಮಿಡಿದ ಅಪರೂಪದ ಕಥೆ ಇದು. ಸ್ವೀಡನ್ನಿನ ಹನ್ನೊಂದು ವರ್ಷದ ಬಾಲಕ ಮುಹ್ರಾಫ್ ಹಮೀದ್ ತನ್ನ ದೇಣಿಗೆ ಸಂಗ್ರಹ ಕಾರ್ಯದಿಂದ ರಾತ್ರಿ ಬೆಳಗಾಗುವಷ್ಟರಲ್ಲಿ ಜಗತ್ತಿನಾದ್ಯಂತ ‘ಸೆಲೆಬ್ರಿಟಿ’ ಆಗಿ ಕಂಗೊಳಿಸುತ್ತಿದ್ದಾನೆ. ಮಾಧ್ಯಮದ ಪಾಲಿಗೆ ಸಂದರ್ಶನಕ್ಕಾಗಿ ಕಾಯ್ದು ನಿಲ್ಲಬೇಕಾದ ಗಣ್ಯ ವ್ಯಕ್ತಿಯಾಗಿದ್ದಾನೆ. ಏಕೆಂದರೆ, ಜನಾಂಗೀಯ ನಿಂದನೆಯನ್ನು ಎದುರಿಸಿದರೂ ಚಾರಿಟಿ ಸಂಸ್ಥೆಯೊಂದಕ್ಕೆ ದೊಡ್ಡ ಮೊತ್ತದ ದೇಣಿಗೆ ಸಂಗ್ರಹ ಮಾಡುವಲ್ಲಿ ಆತ ಯಶ ಕಂಡಿದ್ದಾನೆ. ಅಂದಹಾಗೆ, ಆತ ಸಂಗ್ರಹಿಸಿ ತಂದಿದ್ದು ನೂರೋ, ಸಾವಿರವೋ ಡಾಲರ್ ಅಲ್ಲ, ಬರೊಬ್ಬರಿ 2.33 ಲಕ್ಷ ಡಾಲರ್ (1.90 ಕೋಟಿ ರೂಪಾಯಿ) ಮೊತ್ತವನ್ನು!

ಮೇಫ್ಲವರ್ ಚಿಲ್ಡ್ರನ್ಸ್ ಚಾರಿಟಿ ಸಂಸ್ಥೆಯ ಪರವಾಗಿ ನಿಧಿ ಸಂಗ್ರಹಿಸಲು ಹೊರಟ ಹಮೀದ್, ಆನ್‌ಲೈನ್ ಹಾಗೂ ಆಫ್‌ಲೈನ್ ದಾರಿಗಳೆರಡನ್ನೂ ಕಂಡುಕೊಂಡ. ಕಾಗದದ ಹೂವಿನ ಪಿನ್‌ಗಳನ್ನು ಮಾರಾಟ ಮಾಡಿ ನಿಧಿ ಸಂಗ್ರಹಿಸಿದ ಆತ, ಸ್ವೀಡನ್ ಪ್ರಧಾನಿಗೂ ಪಿನ್ ಮಾರಾಟ ಮಾಡಿದ್ದು ವಿಶೇಷ. ಮೇಫ್ಲವರ್ ಸಂಸ್ಥೆಯ ದಾಖಲೆಗಳ ಪ್ರಕಾರ ಯಾವುದೇ ಮಗು ಹೆಚ್ಚೆಂದರೆ 125 ಡಾಲರ್ ನಿಧಿ ಸಂಗ್ರಹ ಮಾಡಬಲ್ಲುದು. ಆದರೆ, ಹಮೀದ್ ಎಲ್ಲ ದಾಖಲೆಗಳನ್ನೂ ಮೀರಿ ದೇಣಿಗೆ ಸಂಗ್ರಹಿಸಿ ತಂದಿರುವುದು ಸಂಸ್ಥೆಯ ವ್ಯವಸ್ಥಾಪಕರನ್ನು ಅಚ್ಚರಿಗೆ ನೂಕಿದೆ.

‘ಇಂತಹ ಚಮತ್ಕಾರವನ್ನು ನಾವು ಹಿಂದೆಂದೂ ನೋಡಿರಲಿಲ್ಲ. ನಮ್ಮ ಸಂಸ್ಥೆಗೆ ನೂರು ವರ್ಷಗಳಿಗೂ ಅಧಿಕ ಇತಿಹಾಸವಿದೆ. ಬಾಲಕನೊಬ್ಬ ಇಷ್ಟೊಂದು ದೊಡ್ಡ ಮೊತ್ತದ ಹಣ ಸಂಗ್ರಹಿಸಿರುವುದು ಇದೇ ಮೊದಲ ಸಲವಾಗಿದೆ’ ಎನ್ನುತ್ತಾರೆ ಚಾರಿಟಿ ಸಂಸ್ಥೆಯ ಮುಖ್ಯಸ್ಥ ಆ್ಯಸೆ ಹಾನೆಲ್.

ಹಮೀದ್‌ನ ತಂದೆ–ತಾಯಿಯ ಮೂಲ ಇಥಿಯೊಪಿಯಾ. ಆದರೆ, ಈ ಹುಡುಗ ಸ್ವೀಡನ್ನಿನಲ್ಲಿಯೇ ಜನಿಸಿದ್ದಾನೆ. ಈ ಕುಟುಂಬ ಸ್ವೀಡನ್ನಿನಲ್ಲಿಯೇ ಆಶ್ರಯ ಪಡೆದಿದೆ. ಕಠಿಣ ನಿಯಮಗಳು ಜಾರಿಯಲ್ಲಿರುವ ಈ ದೇಶದಲ್ಲಿ ಆತನ ಕುಟುಂಬಕ್ಕೆ ಪೌರತ್ವ ಇನ್ನೂ ಸಿಕ್ಕಿಲ್ಲ. ಹಮೀದ್‌ನ ತಂದೆ–ತಾಯಿ ಈ ದೇಶದಲ್ಲಿಯೇ ಬದುಕಿನ ಹಾದಿಯನ್ನು ಕಂಡುಕೊಂಡಿದ್ದಾರೆ. ಈ ಹುಡುಗ ನಿಧಿ ಸಂಗ್ರಹಕ್ಕೆ ಹೊರಟಿದ್ದು ಇದೇ ಮೊದಲ ಸಲವಂತೆ. ‘ಪಿನ್‌ಗಳ ಮಾರಾಟಕ್ಕೆ ಹೋದಾಗ ಮೊದಮೊದಲು ಯಾರೂ ತೆಗೆದುಕೊಂಡಿರಲಿಲ್ಲ. ಆಗ ತುಂಬಾ ನಿರಾಸೆಯಾಗಿತ್ತು. ಅಲ್ಲದೆ, ಜನಾಂಗೀಯ ನಿಂದನೆಯನ್ನೂ ನಾನು ಅನುಭವಿಸಬೇಕಾಯಿತು. ಏನು ಮಾಡುವುದು ತೋಚಲಿಲ್ಲ. ಈ ಬಗೆಗೆ ನಾನು ಫೇಸ್‌ಬುಕ್‌ನಲ್ಲಿ ಬರೆದುಕೊಂಡೆ. ಆಗ ನನಗೆ ಅಭೂತಪೂರ್ವ ಎನ್ನುವಂತಹ ಬೆಂಬಲ ಸಿಕ್ಕಿತು. ಪ್ರಧಾನಿ ಕೂಡ ನನ್ನಿಂದ ಪಿನ್ ಖರೀದಿಸಿದರು’ ಎಂದು ಹಮೀದ್ ಹೇಳುತ್ತಾನೆ.

ಹಮೀದ್ ಹಾಕಿದ ಪೋಸ್ಟ್‌ಅನ್ನು ಆತನ ಸಂಬಂಧಿ ಲೈಲಾ ರೆಹಮಾನ್ ಕೂಡ ಶೇರ್ ಮಾಡಿಕೊಂಡಿದ್ದರು. ‘ಹಮೀದ್‌ನ ಪೋಸ್ಟ್‌ಗೆ ಸಿಕ್ಕ ಬೆಂಬಲ ನೋಡಿ ನನಗೆ ಶಾಕ್ ಆಯ್ತು. ಈ ಪೋಸ್ಟ್ ಸಿಕ್ಕಾಪಟ್ಟೆ ಶೇರ್ ಆಯ್ತು. ಹಾಗೆಯೇ ಹಮೀದ್‌ನ ಪಿನ್‌ಗಳು ಆನ್‌ಲೈನ್‌ನಲ್ಲಿ ಭರ್ಜರಿಯಾಗಿ ಬಿಕರಿಯಾದವು’ ಎಂದು ಅವರು ವಿವರಿಸುತ್ತಾರೆ.

ಮಕ್ಕಳು ನಿಧಿ ಸಂಗ್ರಹ ಮಾಡಿಕೊಟ್ಟಾಗ, ಅವರು ಸಂಗ್ರಹಿಸಿದ ಮೊತ್ತದಲ್ಲಿ ಶೇ. 10ರಷ್ಟನ್ನು ಪ್ರೋತ್ಸಾಹ ಧನವಾಗಿ ಸಂಗ್ರಹಿಸಿದ ಮಕ್ಕಳಿಗೇ ವಾಪಸ್ ನೀಡಲಾಗುತ್ತದೆ. ಹೀಗಾಗಿ ಹಮೀದ್‌ಗೆ ₹19 ಲಕ್ಷದಷ್ಟು ಮೊತ್ತ ಪ್ರೋತ್ಸಾಹ ಧನದ ರೂಪದಲ್ಲಿ ಸಿಕ್ಕಿದೆ. ಈ ಹಣದಿಂದ ನಾವು ಸ್ವೀಡನ್ನಿನ ಕಾಯಂ ಪೌರತ್ವ ಪಡೆಯಬಹುದೇ ಎಂದು ಆತ ಮುಗ್ಧವಾಗಿ ಪ್ರಶ್ನಿಸುತ್ತಾನೆ. ಆದರೆ, ನಾವು ಇಲ್ಲಿನ ಪೌರತ್ವ ಪಡೆಯುವುದು ಅಷ್ಟು ಸುಲಭ ಇಲ್ಲವಪ್ಪ ಎಂದು ಆತನ ತಾಯಿ ನಿಟ್ಟುಸಿರು ಬಿಡುತ್ತಾ ಹೇಳುತ್ತಾರೆ.

‘ಒಂದಿಷ್ಟು ಪಾಕೆಟ್ ಮನಿ ಸಿಗುತ್ತದೆ ಎಂಬ ಆಸೆಯಿಂದ ನಾನು ನಿಧಿ ಸಂಗ್ರಹಕ್ಕೆ ಮುಂದಾದೆ. ಆದರೆ, ಇಷ್ಟೊಂದು ದುಡ್ಡು ಸಿಗುತ್ತದೆ ಎಂಬ ನಿರೀಕ್ಷೆ ಖಂಡಿತಾ ಇರಲಿಲ್ಲ’ ಎಂದು ಹಮೀದ್ ಹೇಳುತ್ತಾನೆ. ಮೇಫ್ಲವರ್ ಚಿಲ್ಡ್ರನ್ಸ್ ಚಾರಿಟಿ ಸಂಸ್ಥೆಯು ಪ್ರತಿವರ್ಷವೂ ನಿಧಿ ಸಂಗ್ರಹ ಕಾರ್ಯವನ್ನು ನಡೆಸುತ್ತದೆ. ಹೀಗೆ ಸಂಗ್ರಹವಾದ ಹಣವನ್ನು ಅಸಹಾಯಕ ಮಕ್ಕಳಿಗೆ ಬಟ್ಟೆ ಕೊಡಿಸಲು, ಶಿಕ್ಷಣದ ವ್ಯವಸ್ಥೆ ಮಾಡಲು ಮತ್ತು ಅವರ ಇತರ ಅಗತ್ಯಗಳನ್ನು ಪೂರೈಸಲು ಬಳಕೆ ಮಾಡಲಾಗುತ್ತದೆ.

‘ನಿನಗೆ ಇಷ್ಟೊಂದು ದುಡ್ಡು ಬಂದಿದೆಯಲ್ಲ, ಏನು ಮಾಡುತ್ತಿ’ ಎಂದು ಹಮೀದ್‌ನನ್ನು ಪ್ರಶ್ನಿಸಿದರೆ, ಆತನ ಬೇಡಿಕೆ ತುಂಬಾ ಸಿಂಪಲ್ ಆಗಿದೆ. ‘ನನಗೊಂದಿಷ್ಟು ಹೊಸ ಬಟ್ಟೆಗಳು ಬೇಕು. ಅವುಗಳನ್ನು ಖರೀದಿ ಮಾಡುವೆ. ನನ್ನ ತರಬೇತುದಾರರಿಗೆ ಮತ್ತು ಕುಟುಂಬದವರಿಗೆ ಕೆಲವೊಂದು ವಸ್ತುಗಳು ಬೇಕು. ಅವುಗಳನ್ನೂ ಖರೀದಿಸುವೆ. ಅಷ್ಟೇ ಮುಗಿಯಿತು’ ಎಂದು ಆತ ಉತ್ತರಿಸುತ್ತಾನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65